ದಿ.15-06-2020

# ಕರೊನಾ ಮಹಾಮಾರಿ ಜಾಗೃತಿ ಕಾರ್ಯಕ್ರಮ




ಜಗತ್ತನಾದ್ಯಂತ ಮಾನವ ಜೀವ ಸಂಕುಲವನ್ನು ಭಯಾನಕ ಕೂಪಕ್ಕೆ ದೂಡಿದ'ಕರೊನಾ ಮಹಾಮಾರಿ ಕುರಿತು ಪಿ.ಪಿ.ಜಿ.ಕಲಾಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಸಂಘಟಿಸಲಾಯಿತು.


ಪ್ರಾಚಾರ್ಯರಾದ ಶ್ರೀ ಜಿ.ಎಸ್.ಯತ್ನಟ್ಟಿ ಉಪನ್ಯಾಸರಾದ ಪ್ರೊ ಎಂ.ಐ.ಜೋಬಾಳಿ ಪ್ರೊ ಬಿ.ಎಂ.ಗಾಣಗೇರ ಡಾ:ಆರ್.ಎಸ್.ದಾನರಡ್ಡಿ ಪ್ರೊ ಶ್ರೀಮತಿ ಎಂ.ಎನ್.ಹೊಂಬಾಳಿ ಉಪಸ್ಥಿತರಿದ್ದರು

ವಿದ್ಯಾರ್ಥಿಗಳು ಕರೊನಾ ಬಗ್ಗೆ ಭಯ ಪಡಬಾರದು ಆದರೆ ಜಾಗೃತಿ ಅತೀ ಮಖ್ಯವಾಗಿದೆ ರೋಗ ಲಕ್ಷಣವನ್ನುಅರಿತು ಕೂಡಲೇ ವೈಧ್ಯರನ್ನು ಸಂಪರ್ಕಿಸು ಸೂಕ್ತ ಔಷದೋಪಚಾರ ಅಂತರ ಕಾಯ್ದಿಕೊಳ್ಳಬೇಕು. ರೋಗಲಕ್ಷಣ ಗೋಚರಿಸಿದ ಕೂಡಲೇ ಆಸ್ಪತ್ರೆಗೆ ಬೇಟಿ ನೀಡಬೇಕು ಎಂದು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಲಾಯಿಯಿತು.

ಕಾರ್ಯಕ್ರಮದಲ್ಲಿ ಉಚಿತವಾಗಿ ಮಾಸ್ಕ ಹಾಗೂ ಸಾನಿಟೈಜರ ವಿತರಿಸಲಾಯಿತು.ನಿಮ್ಮ ಕುಟುಂಬ ಸದಸ್ಯರು ಸ್ನೇಹಿತರಿಗೆ ಜಾಗೃತಿ ಮೂಡಿಸಲು ಸೂಚಿಸಲಾಯಿತು

# ನೀರಿನ ಸದ್ಬಳಕೆ ಅತೀ ಮುಖ್ಯ



ಇಂದು ಪಿ.ಪಿ.ಜಿ ಕಲಾ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ನೀರಿನ ಸದ್ಬಳಕೆ ಕಾರ್ಯಕ್ರಮದಲ್ಲಿ ಪ್ರಾಚಾರ್ಯರಾದ ಡಾ:ಜಿ.ಎಸ್.ಯಕ್ಕಟ್ಟಿ ಪ್ರೊ.ಶ್ರೀಮತಿ ಎಂ.ಎಸ್.ಹೊಂಬಾಳಿ ಪ್ರೊ.ವಿ.ಎಂ.ಗಾಣಿಗೇರ ಪ್ರೊ.ವಿ.ಕೆ.ಹೂಗಾರು ಉಪಸ್ಥಿತರಿದ್ದು ಅರಿವು ಮೂಡಿಸುವ ಕಾರ್ಯಕ್ರಮ ಸಂಘಟಿಸಲಾಗಿತ್ತು

ಮನುಷ್ಯನ ಬದುಕಿಗೆ ಅತೀ ಮುಖ್ಯವಾದ ಅಂಶ ಎಂದರೇ'ನೀರು'ಭೂಮಿಯ ಮೇಲೆ ಶೇ.70./.ರಷ್ಟು ನೀರು ಇದ್ದು ಶೇ 30./.ಮಾತ್ರ ಭೂಪ್ರದೇಶವಿದೆ.ಪ್ರತಿಯೊಂದು ಜೀವರಾಶಿಗೆ ನೀರು ಅತೀಮುಖ್ಯವಾಗಿದೆ ಅದರಲ್ಲಿ ಕುಡಿಯಲು ಯೋಗ್ಯವಾದ ನೀರು ಅಲ್ಪ ಪ್ರಮಾಣದಲ್ಲಿದೆ.ಜಾಗತಿಕವಾಗಿ ಜನಸಂಖ್ಯೆ ಅಗಾಧ ಪ್ರಮಾಣದಲ್ಲಿ ಬೆಳೆಯುತ್ತಿದ್ದು ಜನರು ಬದುಕಿಗೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡುವದು ದೊಡ್ಡ ಸಮಸ್ಯೆಯಾಗಿದೆ ಪ್ರತಿಯೊಂದು ದೇಶದ ಸರಕಾರಗಳು ತಮ್ಮ ಪ್ರಜೆಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಸಾವಿರಾರು ಕೋಟಿ ರೂಪಾಯಿಗಳನ್ನು ನಿತ್ಯ ವಿನಿಯೋಗಮಾಡುತ್ತಿವೆ.

ಸರಕಾರದೊಂದಿಗೆ ನಾಗರಿಕರಾದ ನಾವು ಕೂಡ ಕೈ ಜೋಡಿಸಬೇಕಾಗಿದೆ.ನೀರನ್ನು ಮಿತವಾಗಿ ಬಳಸುವದು,ಅನವಶ್ಯಕ ಬಳಕೆಯನ್ನು ತಡೆಗಟ್ಟುವದು,ಚರಂಡಿಗೆ ಸುಮ್ಮನೆ ನೀರು ಹರಿಸುವದನ್ನು ತಡೆಯಬೇಕಾಗಿದೆ.ನೀರಿನ ಸದ್ಬಳಕೆ ಅತೀ ಮುಖ್ಯವಾಗಿದೆ

ದಿ.2020–21